ದಿನಾಂಕ: *06.03.2026* ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಬಿ.ಪಿ.ಆರ್. ವಕೀಲರಿಂದ ಅರ್ಜಿದಾರರ ಪರವಾಗಿಃ

4. ದಿನಾಂಕ 14.11.2011 ರ ನೋಟೀಸನ್ನು ಹಾಜರುಪಡಿಸಿದ್ದು ಅದನ್ನು ನಿಪಿ.7 ಎಂದು ಗುರುತಿಸಲಾಯಿತು. ದಿನಾಂಕ 03.08.2015 ರ ಅಂತಿಮ ಐತೀರ್ಪು ತಿಳುವಳಿಕೆಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.8 ಎಂದು ಗುರುತಿಸಲಾಯಿತು. ಐತೀರ್ಪಿನ ನಾಲ್ಕು ಪುಟಗಳ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.9 ಎಂದು ಗುರುತಿಸಲಾಯಿತು. ದಿನಾಂಕ 22.11.2012 ರಂದು ಭೂಸ್ವಾಧೀನ ಕಾಯ್ದೆಯ ಕಲಂ 6(1) ರಡಿಯಲ್ಲಿ ಹೊರಡಿಸಲಾದ ಘೋಷಣೆಯ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.10 ಎಂದು ಗುರುತಿಸಲಾಯಿತು. ಪರಿಹಾರವನ್ನು ಸ್ವೀಕರಿಸಿದ ಬಗ್ಗೆ ನೀಡಿದ ರಶೀದಿಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.11 ಎಂದು ಗುರುತಿಸಲಾಯಿತು. ಜಂಟಿ ಅಳತೆ ತಃಖ್ತೆಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.12 ಎಂದು, ಅದರಲ್ಲಿ ಕ್ರಮ ಸಂಖ್ಯೆ24 ರಲ್ಲಿರುವ ಅರ್ಜಿದಾರರ ಜಮೀನಿಗೆ ಸಂಬಂಧಿಸಿದ ವಿವರಗಳನ್ನು ನಿಪಿ.12(ಎ) ಎಂದು ಗುರುತಿಸಲಾಯಿತು. ಭದ್ರಾ ಮೇಲ್ದಂಡೆ ಯೋಜನೆ ಪ್ಯಾಕೇಜ್ 2 ರ ತೋಟಗಾರಿಕೆ ಬೆಳೆಗಳ ಮೌಲ್ಯ ಮಾಪನಾ ನಿರ್ಧರಣಾ ಪಟ್ಟಿಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.13 ಎಂದು ಗುರುತಿಸಲಾಯಿತು. 2013-2014 ನೇ ಸಾಲಿನಿಂದ 2024-2025 ರವರೆಗಿನ ತರೀಕೆರೆ ತಾಲ್ಲೂಕು ಉಪನೋಂದಣಿ ಕಛೇರಿಯ ವ್ಯಾಪ್ತಿಗೆ ಒಳಪಡುವ ಚಾಕೋನಹಳ್ಳಿ ಗ್ರಾಮವನ್ನು ಒಳಗೊಂಡಿರುವ ಸ್ಥಿರಾಸ್ತಿಗಳ ಚಾಲ್ತಿ ಮತ್ತು ಪರಿಷ್ಕೃತ ದರಗಳ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.14 ಎಂದು ಗುರುತಿಸಲಾಯಿತು. 2011-2012 ನೇ ಸಾಲಿನಿಂದ 2021-2022 ರವರೆಗಿನ ಕೃಷಿ ಹುಟ್ಟುವಳಿ

ಮಾರುಕಟ್ಟೆಯ ವಿವರದ ತಃಖ್ತೆಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.15 ಎಂದು ಗುರುತಿಸಲಾಯಿತು. 2010-2011 ನೇ ಸಾಲಿನಿಂದ 2024-2025 ರವರೆಗಿನ ತರೀಕೆರೆ ತಾಲ್ಲೂಕು ಉಪನೋಂದಣಿ ಕಛೇರಿಯ ವ್ಯಾಪ್ತಿಗೆ ಒಳಪಡುವ ಹಳಿಯೂರು ಗ್ರಾಮವನ್ನು ಒಳಗೊಂಡಿರುವ ಸ್ಥಿರಾಸ್ತಿಗಳ ಚಾಲ್ತಿ ಮತ್ತು ಪರಿಷ್ಕೃತ ದರಗಳ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.16 ಎಂದು ಗುರುತಿಸಲಾಯಿತು. ದಿನಾಂಕ 25.08.1997 ರ ರಾಜ್ಯ ಪತ್ರದ ದೃಢೀಕತ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.17 ಎಂದು ಗುರುತಿಸಲಾಯಿತು. ದಿನಾಂಕ 06.08.2024 ರಂದು ತರೀಕೆರೆ ಪುರಸಭೆಯ ಮುಖ್ಯಾಧಿಕಾರಿಗಳು ನೀಡಿರುವ ದೃಢೀಕರಣವನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.18 ಎಂದು ಗುರುತಿಸಲಾಯಿತು. ತೋಟಗಾರಿಕೆ ಬೆಳೆಗಳ ಮಾಹಿತಿಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.19 ಎಂದು ಗುರುತಿಸಲಾಯಿತು. ಚಾಕೋನಹಳ್ಳಿ ಗ್ರಾಮ ನಕ್ಷೆಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.20 ಎಂದು ಗುರುತಿಸಲಾಯಿತು. 2011-2012 ರಿಂದ 2024-2025 ನೇ ಸಾಲಿನವರೆಗಿನ ತೆಂಗಿನ ಕಾಯಿ, ಮಾವು, ಹುಣಸೆಹಣ್ಣು, ಅಡಿಕೆ ಬೆಳೆಗಳ ಧಾರಣೆ ವಿವರದ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.21 ಎಂದು ಗುರುತಿಸಲಾಯಿತು.

(ಎದುರುದಾರರ ಪರ ವಕೀಲರ ಕೋರಿಕೆಯ ಮೇರೆಗೆ ಸಾಕ್ಷಿಯ ಮುಂದಿನ ಪಾಟೀ ಸವಾಲನ್ನು ಮುಂದೂಡಲಾಯಿತು)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ಭಾನುಮತಿ ಬಿ.ಸಿ)

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.